Regd No. M. 1299 SATYAVADI Founded 1917

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 11] 3 ಶನಿವಾರ 4—1—47 [ಬಿಡಿ ಪ್ರತಿ 3 ಪೈ

ವರ್ತಮಾನ ಸಂಗ್ರಹ

ಪೆಷಾವರ್, ಜ 2 — ಗಡಿನಾಡಿನ ಧಿ ಖಾನ್ ಅಬ್ದುಲ್ ಗಫಾರ್ ಖಾ ವರು ಬಿಹಾರಿಗೆ ಭೇಟಿ ಕೊಟ್ಟು ಪ ರಿಸ್ಥಿತಿಯನ್ನು ಪರಿಶೀಲಿಸಬೇಕೆಂದು ಗಡಿ ನಾಡು ಪ್ರಾಂತ್ಯದ ಕಾಂಗ್ರೆಸ್ ಸಮಿತಿ ನಿರ್ಣಯವು ತದಿಂದ ಒಪ್ಪಿದೆ

ಂ ಂ

ಬೆಂಗಳೂರು, ಜ 3 — ದೊಡ್ಡ ಬಾವಳ್ಳಿಯ ಶ್ರೀ ಸುಬ್ಬಯ್ಯ ಎಂಬ ವರ್ತಕನಿಗೆ ಬೆಲ್ಲವನ್ನು ಹೆಚ್ಚು ಬೆಲೆಗೆ ಮಾರಿದ ತಪ್ಪಿಗಾಗಿ ರೂ. 40 ಜುಲ್ಮಾನೆ ಅಥವಾ 15 ದಿವಸ ಸಾದಾ ಸಜಾ ವಿಧಿಸಲಾಯಿತು.

ಂ ಂ

ಕಲ್ಕತ್ತಾ, ಜ 3 — ನ್ಯಾಯ ಸಾಮಾಯ ಮಂತ್ರಿ ನೇತೃತ್ವದಲ್ಲಿ ಬೀಹಾರ್ ನಿಯೋಗ ಗಾಂಧೀಜಿಯನ್ನು ಕಂಡು ಜಾತಿ ಗಲಭೆ ಪರಿಸ್ಥಿತಿಯನ್ನು ವಿವರಿಸಿ ಪ್ರಚಾರದ ನಿಮಿತ್ತ ಮೂವತ್ತು ಸಾವಿರ ಮಂದಿ ನಿರಾಶ್ರಿತರು ಬಿಹಾರ್ ತ್ಯಜಿಸಿರುವುದಾಗಿ ತಿಳಿಸಿದರು

ಂ ಂ

ಬೆಂಗಳೂರು, ಡಿ 3 — ಮೈಸೂರು ಕಾಂಗ್ರೆಸಿನ ರಾಜಕೀಯ ಭವಿಷ್ಯವನ್ನು ಉತ್ತೇಜಿಸಿ ಸರ್ದಾರ್ ಪಟೇಲರು ಪತ್ರವನ್ನು ಬರೆದಿರುವರೆಂದು ಗೊತ್ತಾಗಿದೆ.

ಂ ಂ

ಮೆಡ್ರಿಡ್, ಜ 3 — ಜನರಲ್ ಫ್ರಾಂಕೋ ಮಾಡಿದ ಆಕಾಶವಾಣಿ ಭಾಷಣದಲ್ಲಿ 'ಸ್ಪೇನ್ ಮೇಲೆ ಬೀಳಬೇಕೆಂದಿರುವ ದ್ವೇಷಾಸೂಯಪರರಾದ ವಿಶ್ವಜನರನ್ನು ಏನೂ ಕಷ್ಟಬಂದರೂ ಎದುರಿಸಲು ಸಿದ್ಧನು' ಎಂದಿದ್ದಾರೆ.

ಂ ಂ

ಲಂಡನ್, ಜ 3 — ನಾಲ್ಕು ಸಾವಿರ ಮಂದಿ ಸ್ತ್ರೀ ಕೆಲಸಗಾರರನ್ನು ತೆಗೆಯಹಾಕಿ ಟ್ರಾಂ ಮತ್ತು ಬಸ್ ಕಂಡಕ್ಟರ್ ಕೆಲಸಕ್ಕೆ ಗಂಡಸರನ್ನು ನೇಮಿಸಲು ಲಂಡನ್ ಟ್ರಾನ್ಸ್‌ಪೋರ್ಟ್ ಕಂಪೆನಿ ನಿರ್ಧರಿಸಿದೆ.

ಂ ಂ

ಬೆಂಗಳೂರು ಜ 3— ಶ್ರೀಮನ್ಮಹಾರಾಜರವರಿಗೆ ಮೈಸೂರು ಕಾಂಗ್ರೆಸ್ ರೆದಿರುವ ಪತ್ರವನ್ನು ಎಂಡು ಮೂರು ನಗಳಲ್ಲೇ ತಲಪಿಸಲಾಗುವುದೆಂದೂ ಂಗ್ರೆಸ್ ಕಾರ್ಯಕಾರಿ ಸಮಿತಿಯು ಪತ್ರವನ್ನು ಕಡೆಯ ಸಾರಿ ಪರಿಶೀಲಿ ಂದೂ, ಜವಾಬ್ದಾರಿ ಸಂಕಾರವನ್ನು ಮಾಡದಿದ್ದರೆ ಸುಭಾಷ್ ನಗರದ ದಂತೆ ವರ್ತಿಸಲಾಗುವುದೆಂಬ ದಲ್ಲಿ ಅಡಕವಾಗಿರುವುದೆಂ ಸಿಬಂದಿದೆ.

ಶ್ರೀ ಮುನ್ಷಿಯವರ ಹೇಳಿಕೆ

— —

ಬೊಂಬಾಯಿ ಜ 3 — 1946 ನೇ ಇಸವಿ ಮೇ 16 ಅಮಾತ್ಯ ಪ್ರಣಾಳಿಕೆ ಬ್ರಿಟಿಷ್ ಮತ್ತು ಭಾರತಗಳಿಗೆ ಸಂಧಿ ಕಲ್ಪಿಸುವ ಹಾಗಿದೆ.

ಡಿಸೆಂಬರ್ 6 ಹೇಳಿಕೆ ಭಾರತೀಯ ಸಂಧಾನವನ್ನು ಕಲಕಿಬಿಟ್ಟಿರುವುದು ಖಂಡನೀಯ.

ವರ್ಗೀಕರಣ ಬಲತ್ಕ್ರೋಯೊದಕ್ಕೆ ಅಸ್ಪದವೀಯುವುದಿಲ್ಲ. ರಾಜ್ಯಾಂಗ ರಚನಾ ಸಮಿತಿಗೆ ಅದರ ಇತ್ಯಾದಿತ್ಯೆತೆ ಸಂಬಂಧಿಸಿದುದು ಎಂಬುದಾಗಿ ಶ್ರೀ ಕೆ. ಎಂ. ಮುನ್ಷಿ ತಿಳಿಸಿದ್ದಾರೆ.

ಸಾದರ ಸ್ವೀಕಾರ

ಮೈಸೂರಿನ ಅಶೋಕ ಫಾರ್ಮೆಸಿ ಮತ್ತು ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದ ಫಾರ್ಮೆಸಿಯವರು ಕಳುಹಿಸಿರುವ ಸುಂದರವಾದ ಗೋಡೆ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ.

ನಾವು ಆರ್ಯ ಜನಾಂಗದ ವೈಶಿಷ್ಟ್ಯವನ್ನು ಕಾಪಾಡಿಕೊಳ್ಳೋಣ. ನಾವು ಬಲಿಷ್ಟವಾದ ಜನಾಂಗವಾಗೋಣ. ಹೊರಗಿನವರ ಒಡ್ಡಿವಾದ ನಮಗೆ ಬೇಡ.

6 ವೃತ್ತಿಗಳನ್ನವಲಂಬಿಸುವುದರಲ್ಲಿ ಪ್ರತಿಯೊಬ್ಬನು ಅವನವನ ಬುದ್ಧಿಶಕ್ತಿ ಅವನವನ ಆರ್ಥಿಕ ಸ್ಥಿತಿಗೆ ಅನುಗುಣವಾದ ಜೀವನವನ್ನವಲಂಬಿಸಿ ಸಮಾಜದೊಂದಿಗೆ ನಿಕಟ ಸಂಬಂಧವನ್ನು ಹೊಂದಿ ತನ್ನ ಹಕ್ಕುಬಾಧ್ಯತೆಗಳನ್ನು ತಿಳಿದು ಹೆಚ್ಚು ಹೆಚ್ಚಾಗಿ ರಾಜಕೀಯ ಪ್ರಗತಿಯನ್ನು ಸಾಧಿಸಲಾಗಿ ರಾಜಕೀಯ ಪ್ರಗತಿಯನ್ನು ಸಾಧಿಸಲಿ.

ಬಿ. ಕೃಷ್ಣಮೂರ್ತಿರಾವ್,
ಪಡೆ.

ಶ್ರೀ ಹನುಮಂತಯ್ಯನವರ ದಸ್ತಗಿರಿಗಾಗಿ ಖಂಡನೆ

ಶ್ರೀ ಭದ್ರಣ್ಣನವರ ನಿಧನಕ್ಕಾಗಿ ಸಂತಾಪ

ಮಂಡ್ಯ ಜ 3 — ಮೈಸೂರು ಸಕ್ಕರೆ ಕೆಲಸಗಾರರ ಬಹಿರಂಗ ಸಭೆಯು 30—12—46 ನೇ ದಿನ ಕಾರ್ಖಾನೆ ಮುಂಭಾಗದ ಮೈದಾನದಲ್ಲಿ ಸೇರಿತ್ತು. ಶ್ರೀ ಎಂ ಮಹಾಬಲರಾವ್‌ರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಮಳವಳ್ಳಿ ವೀರಪ್ಪ, ಎ. ರಾಮಣ್ಣ ಪುಟ್ಟಸ್ವಾಮಿ ಮತ್ತು ಲಿಂಗೇಗೌಡರವರು ಭಾಷಣ ಮಾಡಿದರು. ಸಭೆಯಲ್ಲಿ ಕೆಳಗೆಕಂಡ ನಿರ್ಣಯಗಳು ಅಂಗೀಕೃತವಾದವು.

1 ಪೌರವಾಣಿ ಸಂಪಾದಕರೂ ಉಜ್ವಲದೇಶ ಭಕ್ತರು ಪ್ರಮುಖ ಕಾಂಗ್ರೆಸ್ ಕೆಲಸಗಾರರೂ ಆಗಿದ್ದ ಶ್ರೀ ಆರ್. ವಿ. ಭದ್ರಣ್ಣನವರ ನಿಧನಕ್ಕಾಗಿ ಈ ಸಭೆಯು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತಾ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

2 ಪ್ರಜಾಪ್ರತಿನಿಧಿ ಸಭೆಯು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರನ್ನು ರಾಜದ್ರೋಹ ಅಪಾದನೆಗೆ ಬಂಧಿಸಿರುವ ಸರಕಾರದ ನೀತಿಯನ್ನು ಖಂಡಿಸುತ್ತದೆ. ಅಲ್ಲದೆ ಅವರನ್ನು ಒಡನೇ ಬಿಡುಗಡೆ ಮಾಡಬೇಕೆಂದು ಒಡಿತ್ತಾಯಪಡಿಸುತ್ತದೆ.

.....

ಭಾರಿ ಇಟ್ಟಿಗೆ ಕಾರ್ಖಾನೆಗಳು ಮುಚ್ಚಲ್ಪಡಬಹುದು

ಲಂಡನ್ ಜ 3 — ಸೌದೆ ಅಭಾವದಿಂದ ಲಂಡನ್ನಿನ ಭಾರಿ ಇಟ್ಟಿಗೆ ಕಾರ್ಖಾನೆಗಳೆಲ್ಲ ಮುಚ್ಚಲ್ಪಡಬಹುದೆಂದು ಹೇಳಲಾಗಿದೆ.

ಗಾಂಧೀಜೀಯ ಶಾಂತಿ ನಡಿಗೆ ಆರಂಭ

ಚಾಂದಪುರ, ಜ 3 — [illegible] ಶಾಂತಿ ಯಾತ್ರೆಯನ್ನು ಮಹಾತ್ಮ ಗಾಂಧೀಜೀಯವರು ನಿನ್ನೆಯ ದಿವಸದಿಂದ ಪ್ರಾರಂಭಿಸಿದರು ಬಲಗೈನಲ್ಲಿ ಬೊಂಬಿನ ಕೋಲನ್ನು ಹಿಡಿದು ಮತ್ತೊಂದು ಕೈಯನ್ನು ಸಂಗಡಿಗರೊಬ್ಬರ ಭುಜಕ್ಕೆ ಉರುಗೊಟ್ಟು ಮಹಾತ್ಮಾಜೀ ಕಾಲುತಡಿಗೆಯಿಂದ ಆರಂಭಿಸಿದರು ಶಾಂತಿಯಾತ್ರೆ. ಶ್ರೀರಾಂಪುರವನ್ನು ಪ್ರಾತಃಕಾಲ 7 ಗಂಟೆಗೆ ಖಾಲೀ ಮಾಡಿ ಅದೇ ಪರಿವಾರದೊಂದಿಗೆ 3 ವೈಲಿ ದೂರವಿರುವ ಚಾಂದಿಪುರಕ್ಕೆ ಬಾಪೂಜಿ 9 ಗಂಟೆಗೆ ಸೇರಿದರು, ನಾಲ್ಕೈದು ದಿವಸ ಗಾಂಧಿಜಿ ಚಾಂದ್‌ಪುರದಲ್ಲಿ ತಂಗುವರು. ಚಾಂದ್‌ಪುರ ಪ್ರವೇಶ ಕಾಲದಲ್ಲಿ ಜನ ಹಳ್ಳಿಗರು ಹಿಂಬಾಲಿಸಿದರು. ಹಳ್ಳಿ ಸೇರಿ ಸಂಖ್ಯಾತ ಪ್ರದೇಶದಲ್ಲಿಯೂ ಎರಡು ಪಕ್ಕದಲ್ಲಿಯೂ ಎರಡು ಕೋವುಗಳೂ ಮಹಾತ್ಮರ ದರ್ಶನ ಪಡೆದರು.

ಸೀಮೆ ಎಣ್ಣೆ ಅಂಗಡಿಗಳೆಲ್ಲಾ ಬಂದಾದವು

ಸೈದಾಪೇಟೆ ಜ 3 — ಸೈದಾಪೇಟೆಯಲ್ಲಿನ ಸೀಮೆಯೆಣ್ಣೆ ರೇಷ್ ಡಿಪೋಗಳು ನಗರದ ಏಜೆಂಟರುಗಳಿಂದ ನಡೆಸಲ್ಪಡುವುದೆಂದು ಅಧಿಕಾರಿಗಳು ನಿರ್ಣಯಿಸಿದ್ದೇ ಇದಕ್ಕೆ ಕಾರಣ ! ನೂತನ ವರ್ಷದ ಪ್ರಥಮ ದಿನವೇ ಅನೇಕ ವ್ಯಾಪಾರಸ್ಥರು ಮುಂಚಿನಂತೆ ವ್ಯಾಪಾರ ಮಾಡವರು ಸರ್ಕಾರವು ಅಪ್ಪಣೆಯಿತ್ತರೆ ಅಂಗಡಿಗಳನ್ನು ತೆರೆಯುವರು ಎಂದು ವಿಚಾರಿಸಿದುದರಲ್ಲಿ ತಿಳಿದು ಬಂದಿದೆ.

ಬರ್ಮಾಕ್ಕೆ ಸಂಪೂರ್ಣ ರಾಷ್ಟ್ರೀಯ ಸರ್ಕಾರ

ನವದೆಹಲಿ ಜ 3 — ಈ ಕೂಡಲೇ ವೈಸ್ರಾಯಿ ಕಾರ್ಯಾಂಗವನ್ನು ಬರ್ಮಾ ರಾಷ್ಟ್ರೀಯ ತಾತ್ಕಾಲಿಕ ಸರ್ಕಾರವನ್ನಾಗಿ ಬ್ರಿಟಿಷರು ಅಂಗೀಕರಿಸಬೇಕು, ಅದು ಪೂರ್ಣ ಸ್ವಾತಂತ್ರ್ಯದ್ದಾಗಿರಬೇಕು, ಎಂಬುದಾಗಿ ಬರ್ಮಾ ತಾತ್ಕಾಲಿಕ ಸರ್ಕಾರದ ಉಪಾಧ್ಯಕ್ಷ ಅಂಗಸಾನ್ ತಿಳಿಸಿದರು.

ಅಕ್ಕಿ ಕೊಟ್ಟು ಬಿಟ್ಟರು

ತಂಜಾವೂರು — ಅಭಾವ ಪ್ರದೇಶಗಳಿಗೆ ಕಳುಹಿಸಬೇಕೆಂದು ವ್ಯವಸಾಯ ಅಧಿಕಾರಿ ಅಕ್ಕಿಗಾಗಿ ಮನವಿ ಮಾಡಿಕೊಂಡಿದ್ದರು. 300 ಪಲ್ಲ ದಷ್ಟು ಅಕ್ಕಿಯನ್ನು ವಿುರಾಸುದಾರರುಗಳು ಮನವಿಗೆ ಕೊಟ್ಟು ಬಿಟ್ಟರು.

ನಮ್ಮ ಧಾರ್ಮಿಕ ಸಂಸ್ಥೆಯ ನಿರ್ಣಯಗಳು

—೦—

1. ರಾಜಕೀಯದ ಖಾದಿ ಅಥವ ಗ್ರಾಮೋದ್ಯೋಗಗಳು ಹೇಗೆ ಗಗತ್ಯವಾಗಿ ಆಚರಿಸಲ್ಪಡಬೇಕಾದ ಕಾರ್ಯಗಳೋ ಹಾಗೆ ವರ್ಣಾಶ್ರಮೋಚಿತ ಧರ್ಮಗಳು ಆಯಾ ಮತೀಯರು ಅಗತ್ಯವಾತ ಆಚರಿಸಲ್ಪಡಬೇಕಾದ ಕಾರ್ಯಗಳು. ಒಬ್ಬ ವ್ಯಕ್ತಿಯು ತನ್ನ ದೃಷ್ಟಿಯಿಂದ ತನ್ನ ತತ್ವಕ್ಕೆ ಹೇಗೆ ಮಹತ್ವವನ್ನು ಕೊಡುತ್ತಾನೆಯೋ ಇನ್ನೊಬ್ಬ ವ್ಯಕ್ತಿಯೂ ಹಾಗೆಯೇ ತನ್ನ ದೃಷ್ಟಿಯಿಂದ ತನ್ನ ತತ್ವಕ್ಕೆ ಮಹತ್ವವನ್ನು ಕೊಡುತ್ತಾನೆ.

2. ನಮ್ಮ ವೇದ ಶಾಸ್ತ್ರಗಳೂ ಅವುಗಳಿಗನುಸಾರವಾದ ವಿಧ್ಯುಕ್ತವಾದ ಕರ್ಮಗಳೂ ಅನಾದಿಯಿಂದ ನಡೆದು ಕೊಂಡು ಬಂದಿರತಕ್ಕವು. ಇವುಗಳ ಆಚರಣೆಗೆ ಯಾವ ರಾಜಕೀಯ ಪಂಗಡದವರೇ ಆಗಲೀ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ.

ದೇಶದ ಸ್ವಾತಂತ್ರ್ಯವು ಭಾರತೀಯರೆಲ್ಲರಿಗೂ ಬೇಕಾದುದು. ಇದಕ್ಕೆ ಗಾಂಧೀಜಿಯ ಅನುಯಾಯಿಗಳು ಮಾಡಬೇಕಾದುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಧಾರ್ಮಿಕ ಸಂಸ್ಥೆ ಸಂಪ್ರದಾಯಗಳನ್ನು ರಕ್ಷಿಸ ತಕ್ಕದ್ದು.

3. ರಾಜಕೀಯ ಪಂಗಡದವರು ಅಗತ್ಯವಾಗಿ ಮಾಡಬೇಕಾದ ಗ್ರಾಮ ಪುನರುಜ್ಜೀವನ ಮೊದಲಾದ ರಚನಾತ್ಮಕ ಕಾರ್ಯಗಳನ್ನು ಬಿಟ್ಟು ಹರಿಜನ ದೇವಾಲಯ ಪ್ರವೇಶವೇ ಮೊದಲಾದ ಕ್ರಾಂತಿಕಾರಿ ಕಾರ್ಯಗಳಲ್ಲಿ ಕೈ ಹಾಕುತ್ತಿರುವುದು ದೇಶದ ಜನತೆಯಲ್ಲಿ ಕ್ಷೋಭೆಯನ್ನುಂಟುಮಾಡಿದೆ. ಹರಿಜನರ ಏಳಿಗೆಯಲ್ಲಿ ಸವರ್ಣಿಗಳ ಸಂಪೂರ್ಣ ಸಹಾನುಭೂತಿಯಿದೆ. ಅವರ ಸಾಮಾಜಿಕ ಅಸಹಾಕತೆಯನ್ನು ತೆಗೆದುಹಾಕಿ ಅವರಿಗೆ ಆರ್ಥಿಕ ಅನುಕೂಲಗಳನ್ನುಂಟು ಮಾಡಿಕೊಡುವುದನ್ನು ಬಿಟ್ಟು ನಿರರ್ಥಕವಾಗಿ ಅವರನ್ನು ಕೆಣಕಿ ಅವರಿಗೆ ಕೆಡಕನ್ನುಂಟು ಮಾಡುವುದು ಸರಿಯಲ್ಲ.

4 ಅಂತರ್ಜಾತೀಯ ವಿವಾಹ ಮೊದಲಾದೆ ಹುಚ್ಚು ಕೂಗುಗಳು ನಿಲ್ಲಬೇಕು. ಇದರಿಂದ ಸಮಾಜಕ್ಷೋಭವನ್ನುಂಟುಮಾಡಿದಂತಾಗುತ್ತದೆ. ಒಂದು ಬಲಿಷ್ಠವಾದ ಜನಾಂಗವನ್ನು ಕಟ್ಟಬೇಕಾದರೆ ರಾಜಕೀಯ ಮುಖಂಡರು ಜನರ ಮನಸ್ಸನ್ನು ಒಲಿಸಿಕೊಳ್ಳಬೇಕು. ಆಗ ಎಲ್ಲರೂ ಒಗ್ಗಟ್ಟಿನಿಂದ ಮಾತೃಭೂಮಿಯ ರಕ್ಷಣೆಗೆ ಬಂದು ನಿಲ್ಲುವರು. ಹಿಂಸೆ ಅಹಿಂಸೆಗಳ ತತ್ವದ ಮೇಲೆ ಯಾವ ದೇಶದಲ್ಲಿಯೂ ರಾಜಕೀಯ ವ್ಯವಹಾರವು ನಡೆಯುವುದಿಲ್ಲ.

5 ಹಿಂದೂ ದೇಶಕ್ಕೆ ಪಾಶ್ಚಾತ್ಯ ರೀತಿಯ ಯಾವ ರಾಜಕೀಯ ಪದ್ಧತಿಯನ್ನು ಅಮದು ಮಾಡಬಾರದು – ಕಮ್ಯೂನಿಸಂ, (ಸಮಾಜ ಸಮತಾವಾದ) ನಾರ್ಕ್ಸ್ ತತ್ವಗಳು ನಮ್ಮ ದೇಶಕ್ಕೆ ಅದ್ವಯಿಸುವುದಿಲ್ಲ.

(ಸ್ಥಳವು ಪುಟಕ್ಕೆ ಮುಂದುವರೆದಿದೆ)

.....

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒರೆದು ಪಲಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್‌ರಸ್ತೆ, ಜಿ. ಟಿ. ಪುಡರಾಸು.

At Opera

From 4–1–47 Daily 3 Shows

THE GREAT MAGICIAN

Bela Lagosi — Maria Alba — Lucian Preibal

Morning Shows .... HELLO BEAUTIFUL

Contact with Satyanarayana Pictures Ramanuja Road Mysore

At Ranjit_____ From 3–I–47

C A R A V A N

ಅರೂಣ್ — ಕಮಲಾ ಚಟರ್ಜಿ — ಪಾತ್ರವಹಿಸಿರುವ

ಕಾರವಾನ್

Edited, Printed and Published by M. S Krishna Rao at the Satyavadi Press ChamarajAgrahar, Mysore.

For Quality Printing

L. N. Pr

Sriramp et, M